**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>**
**ಸಿ.ಸಿ. ಸಂಃ 154/2024**

| | | |
|---|---|---|
| ಸಾಕ್ಷಿಯ ಹೆಸರುಃ | ತ್ರಿಶಾಂಕ್ | ಫ್ರಾಸಾಃಃ 04 |
| ತಂದೆಯ ಹೆಸರುಃ | ನಂಜುಂಡ | ಚಾಸಾಃಃ 02 |
| ವಯಸ್ಸುಃ | 14 ವರ್ಷ | ಪ್ರಮಾಣೀಕರಿಸಿದ ದಿಃ 06.02.2026 |
| ಉದ್ಯೋಗಃ | ವಿದ್ಯಾರ್ಥಿ | |
| ವಾಸ ಸ್ಥಳಃ | ಹರವೆ ಮಲ್ಲರಾಜಪಟ್ಟಣ ಗ್ರಾಮ, ಪಿರಿಯಾಪಟ್ಟಣ ತಾಃ | |

ಸಾಕ್ಷಿಯು ಅಪ್ರಾಪ್ತ ವಯಸ್ಕನಾಗಿರುವುದಂರಿದ ಅವರ ಮಾನಸಿಕ ಸ್ಥಿತಿ ಮತ್ತು ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯದ ಬಗ್ಗೆ ತಿಳಿಯುವ ಸಲುವಾಗಿ ಸಾಕ್ಷಿಗೆ ಈ ಕೆಳಕೆಂಡ ಪ್ರಶ್ನೆಗಳನ್ನು ಮುಕ್ತ ನ್ಯಾಯಾಲಯದಲ್ಲಿ ಕೇಳಲಾಯಿತು.

ಪ್ರಶ್ನೆಃ **1** ನಿಮ್ಮ ಹೆಸರೇನು?

ಉಃ **ತ್ರಿಶಾಂಕ್**

ಪ್ರಶ್ನೆಃ **2** ನಿಮ್ಮ ತಂದೆ ಹೆಸರೇನು?

ಉಃ **ನಂಜುಂಡ**

ಪ್ರಶ್ನೆಃ **3** ಎಷ್ಟನೇ ಕ್ಲಾಸ್ನಲ್ಲಿ ಓದುತ್ತಾ ಇದ್ದೀಯಾ?

ಉಃ **8** ನೇ ತರಗತಿ.

ಪ್ರಶ್ನೆಃ **4** ನಿಮ್ಮ ತಾಯಿ ಹೆಸರೇನು?

ಉಃ ರಾಧಾ

ಪ್ರಶ್ನೆಃ **5** ಯಾವ ಊರು?

ಉಃ **ಹರವೆ ಮಲ್ಲರಾಜಪಟ್ಟಣ**

ಪ್ರಶ್ನೆ: **6** ನಿಮ್ಮ ಮನೆಯಲ್ಲಿ ಯಾರು ಯಾರು ಇದ್ದೀರಾ**?**

ಉ: ನಾನು, ನನ್ನ ಅಪ್ಪ, ಅಮ್ಮ ಹಾಗೂಅಣ್ಣ ಇರುತ್ತೇವೆ.

ಸಾಕ್ಷಿಗೆ ನ್ಯಾಯಾಲಯ ಕೇಳುವ ಪ್ರಶ್ನೆಗಳನ್ನು ಅರ್ಥ ಮಾಡಿಕೊಂಡು ಉತ್ತರ ನೀಡಿರುತ್ತಾರೆ.

**ಸಾಕ್ಷಿಯ ಜೊತೆ ಅವರ** ಚಿಕ್ಕಪ್ಪ ಸ್ವಾಮಿರವರು **ಸಹ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದು ಸಾಕ್ಷಿಯನ್ನು ವಿಚಾರಿಸಲಾಗಿ** ಆತನು **ಸಾಕ್ಷಿ ಹೇಳಲು ಮಾನಸಿಕವಾಗಿ ಶಕ್ತಲಾಗಿರುವುದು ಕಂಡುಬಂದಿರುತ್ತದೆ.** ಆದುದರಿಂದ ಸಾಕ್ಷಿ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.

ಮುಖ್ಯ ವಿಚಾರಣೆ: ಸಸಅ ರಿಂದ:

1. ಮೃತ ಕಾಳಯ್ಯ ನನ್ನ ಅಜ್ಜ ಆಗಬೇಕು. ಚಾಸಾ - 3 ನನ್ನ ಅಣ್ಣ. ನನಗೆ ಈ ಪ್ರಕರಣದ ವಿಚಾರ ಗೊತ್ತಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಹಿಂದೆ ನೋಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲು: ಸಸಅ ರವರಿಂದ:

1. ದಿ: 11.10.2023 ರಂದು ಸಂಜೆ 6-30 ಗಂಟೆ ಸಮಯದಲ್ಲಿ ನಾನು ಹಾಗೂ ನನ್ನ ತಾತ ಕಾಳಯ್ಯನವರು ನಮ್ಮ ಮನೆಯ ಮುಂದೆ ರಸ್ತೆಯ ಪುಟ್ ಪಾತ್ ನಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಅದೇ ಸಮಯದಲ್ಲಿ ಬೆಟ್ಟದಪುರ ಕಡೆಯಿಂದ ಒಂದು ಬೈಕನ್ನು ಅದರ ಚಾಲಕ ಅತೀವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ನನ್ನ ತಾತನಿಗೆ ಹಿಂದಿನಿಂದ ಡಿಕ್ಕಿಪಡಿಸಿದನು ಎಂದರೆ ಸರಿಯಲ್ಲ. ಇದರಿಂದ ನನ್ನ ತಾತ ಕೆಳಗೆ ಬಿದ್ದರು ಎಂದರೆ ಸರಿಯಲ್ಲ. ಅವರ ತಲೆಗೆ, ಬಾಯಿಗೆ, ಎಡಭುಜಕ್ಕೆ ಹಾಗೂ ಮೈಕೈಗೆ ಏಟಾಗಿತ್ತು ಎಂದರೆ ಸರಿಯಲ್ಲ. ಸದರಿ ಬೈಕಿನ ನಬರ್ ನೋಡಲಾಗಿ ಅದು ಕೆ.ಎ-09-ಹೆಚ್.ಜಿ-3654 ಹೊಂಡಾ ಶೈನ್ ಬೈಕ್ ಆಗಿತ್ತು ಎಂದರೆ ಸರಿಯಲ್ಲ. ತಕ್ಷಣ ನಾನು ಚಾಸಾ - 1 ರವರಿಗೆ ವಿಚಾರ ತಿಳಿಸಿದೆ ಎಂದರೆ ಸರಿಯಲ್ಲ. ಅಪಘಾತ ಮಾಡಿದ ವ್ಯಕ್ತಿ ಹೆಸರು ಕೃಷ್ಣೇಗೌಡ ಎಂದು ತಿಳಿಯಿತು ಎಂದರೆ ಸರಿಯಲ್ಲ. ಸದರಿ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ಎಂದರೆ ಸರಿಯಲ್ಲ.

2. ಸದರಿ ಅಪಘಾತಕ್ಕೆ ನ್ಯಾಯಾಲಯದ ಮುಂದಿರುವ ಆರೋಪಿಯ ಅತೀವೇಗ ಹಾಗೂ ಅಜಾಗರೂಕತೆಯ ಚಾಲನೆಯೇ ಕಾರಣ ಎಂದು ನಾನು ನಿಪಿ - 4 ರಂತೆ ಪೊಲೀಸರ ಮುಂದೆ ಈಗ ಓದಿ ಹೇಳಿ ಕೇಳಿಸಿಕೊಂಡಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

3. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ವಕೀಲರಿಂದಃ

ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು
ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ